# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

## ದಿನಾಂಕಃ 20.01.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ಪರಮೇಶ್ವರಯ್ಯ ಬಿನ್ ಲೇ. ನಂಜುಂಡಯ್ಯ<br>65 ವರ್ಷ<br>ವ್ಯವಸಾಯ<br>ನೇರಳೆಕೆರೆ |
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

## ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ. ರವರಿಂದ

ನಾನು ನೇರಳೆಕೆರೆ ಗ್ರಾಮದ ವಾದಿ ಎಂದರೆ ಸರಿ. ನಮ್ಮ ಗ್ರಾಮದಿಂದ ದೊಡ್ಡಗುಣಿ ಗ್ರಾಮಕ್ಕೆ ಸುಮಾರು 4 ಕಿಲೋಮೀಟರ್ ಅಗುತ್ತದೆ ಎಂದರೆ ಸರಿ. ದಾವಾಸ್ವತ್ತಿನ ಸ.ನಂಬರ್ ನನಗೆ ಗೊತ್ತು ಅದು 149/2 ಇರುತ್ತದೆ. ವಾದಿಗೆ ವೆಂಕಂಟಚಲಯ್ಯ, ಲಕ್ಷ್ಮೀಕಾಂತ ಎನ್ನುವ ಇಬ್ಬರು ಸಹೋದರು ಇರುತ್ತಾರೆ. ವಾದಿಗೆ ಎಷ್ಟು ಜನ ಸಹೋದರಿಯರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಸದರಿ ವೆಂಕಟಚಲಯ್ಯ ಹಾಗೂ ವಾದಿ ದಿಃ 10.01.1980 ರಂದು ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತಿನ ವಿಸ್ತೀರ್ಣ ಸುಮಾರು 18 ಗುಂಟೆ ಇರಬಹುದು. ಸದರಿ ವಿಭಾಗ ಪತ್ರದಂತೆ ದಾವಾಸ್ವತ್ತಿನಲ್ಲಿ 9 ಗುಂಟೆ ಜಮೀನು ವಾದಿಯ ಭಾಗಕ್ಕೆ ಬಂದಿದ್ದು ಉಳಿದ 9 ಗುಂಟೆ 1 ನೇ ಪ್ರತಿವಾದಿಯ ತಂದೆ ವಂಕಟಚಲಯ್ಯರವರಿಗೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗ ಪತ್ರದಂತೆ ಎಂ ಅರ್ 46/1990-91 ರಂತೆ ಅವರವರ ಹಿಸ್ಸೆಗೆ ಬಂದ ಸ್ವತ್ತಿನ ಖಾತೆ ಪಹಣಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಅವರವರ ಭಾಗಕ್ಕೆ ಬಂದ ಜಮೀನುಗಳ ಅರ್ ಟಿ ಸಿ ಕೂಡ ಅವರವರ ಹೆಸರಿಗೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ.

ವೆಂಕಟಚಲಯ್ಯ ಮೃತಪಟ್ಟ ನಂತರ ಅವರ ಹೆಸರಿನಲ್ಲಿ ಇದ್ದ 9 ಗುಂಟೆ ಜಮೀನಿನ ಖಾತೆ ಪಹಣಿ ಪೌತಿ ವಾರಸು ಮೇಲೆ ಅವರ ಹೆಂಡತಿ ಮಹಾಲಕ್ಷ್ಮಮ್ಮನ ಹೆಸರಿಗೆ ಎಂ ಅರ್ 9/2000-2001 ರಂತೆ ಬದಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು)**

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ

Pw1 present he is cross examined by defendant counsel fully .

Defendant counsel prays time for cross of Pw2.

Call on.25.11.2024.